**ಸರ್:** ಗುಂಡ, ಈಗ ಏನ್ ಮಾಡ್ತಾ ಇದೀಯಾ?
**ಹಳೆ ವಿದ್ಯಾರ್ಥಿ:** ಎಂಬಿಎ ಸರ್!
**ಸರ್:** ಓಹ್ ಮೈ ಗಾಡ್! ಮಾಸ್ಟರ್ ಆಫ್ ಬ್ಯುಸಿನೆಸ್ ಆಡ್ಮಿನಿಸ್ಟ್ರೇಷನ್ ಅಲ್ವಾ?
**ಹಳೆ ವಿದ್ಯಾರ್ಥಿ:** ಅಲ್ಲಾ ಸರ್, 'ಮಂಡ್ಯದಲ್ಲಿ ಬೋಂಡಾ ಅಂಗಡಿ'.

ಕಾಲೇಜು ಹುಡುಗಿಯೊಬ್ಬಳು ಕೆ.ಎಸ್.ಆರ್.ಟಿ.ಸಿ. ಬಸ್ ಹತ್ತಿದಳು. ಡ್ರೈವರ್ ಬಳಿ ಸ್ಟೈಲ್ ಆಗಿ ಹೋಗಿ, 'ಈ ಡಬ್ಬಾ ಯಾವಾಗ ಹೊರಡುವುದು' ಎಂದು ಕೇಳಿದಳು. ಆದಕ್ಕೆ ಡ್ರೈವರ್, 'ಇನ್ನೂ ಸ್ವಲ್ಪ ಕಸ ತುಂಬಿದ ನಂತರ ಹೊರಡುತ್ತೆ' ಎಂದರು.

**ಗಂಡ:** ಪ್ರಿಯೆ, ನಿನಗೋಸ್ಕರ ತಾಜ್ ಮಹಲ್ ಕಟ್ಟಲೆ, ಮೈಸೂರು ಅರಮನೆ ಕಟ್ಟಲೆ?
**ಹೆಂಡತಿ:** ಅಯ್ಯೋ, ಮೂರು ಸಲ ಬ್ಯಾಂಕ್‌ನವರು ಸಾಲದ ನೋಟೀಸ್ ಕಳುಹಿಸಿದ್ದಾರೆ, ಮೊದಲು ಆ ಬ್ಯಾಂಕ್ ಸಾಲಕ್ಕೆ ಬಡ್ಡಿ ಕಟ್ಟಿ.

**ತಂದೆ:** ಸರ್ಕಾರಿ ಪಾಠಶಾಲೆಯ ಉಪಾಧ್ಯಾಯರನ್ನು ಇಂಗ್ಲಿಷ್‌ನಲ್ಲಿ ಏನೆಂದು ಕರೆಯುತ್ತಾರೆ?
**ಮಗ:** ಜಿಎಸ್‌ಟಿ.
**ತಂದೆ:** ದಡ್ಡಾ, ಸರಿಯಾಗಿ ಹೇಳು.
**ಮಗ:** ಹೌದಪ್ಪ, ಗೌರ್ವನಮೆಂಟ್ ಸ್ಕೂಲ್ ಟೀಚರ್!

**ಕೇಶವ:** ಆಶೋಕ, ಮದುವೆಯಾದ ಮೇಲೆ ನಿನ್ನ ಜೀವನ ಹೇಗಿದೆ?
**ಅಶೋಕ:** ಒಂಥರಾ ಇಂಗ್ಲಿಷ್ ಪಿಕ್ಚರ್ ರೀತಿ ಇದೆ ಕಣೋ. ನೋಡೋಕೆ ಬಹಳ ಚೆನ್ನಾಗಿದೆ ಅಂತ ಅನಿಸಿದ್ರೂ ಏನೂ ಅರ್ಥಾನೇ ಆಗ್ತಿಲ್ಲ.










**ಗುರು:** ಲೋ ಕಿಟ್ಟಿ,
ಹಾಸ್ಪಿಟಾಲಿಟಿ ಎಂದರೇನು?
**ಕಿಟ್ಟಿ:** ಆಸ್ಪತ್ರೆಯಲ್ಲಿ ಕೊಡುವ ಟೀ ಸರ್!

**ಗುರು:** ಲೋ ಕಿಟ್ಟಿ,
ಜನರೇಷನ್ ಎಂದರೆ ಏನೋ?
**ಕಿಟ್ಟಿ:** ಜನರಿಗೆ ರೇಷನ್ ಕೊಡುವ ಡಿಪೋ ಸರ್!

**ಗುರು:** ಲೋ ಕಿಟ್ಟಿ,
ಜನಮೇಜಯ ಎಂದರೇನೊ?
**ಕಿಟ್ಟಿ:** ಮೇ ತಿಂಗಳ ಚುನಾವಣೆಯಲ್ಲಿ ಜನರಿಂದ ಗೆದ್ದು ಬರುವ ನಾಯಕ.

**ಮೇಷ್ಟ್ರು:** ಕಿಟ್ಟಿ, ನಿನಗೆ ಯಾವ ಪ್ರಾಣಿ ಇಷ್ಟ?
**ಕಿಟ್ಟಿ:** ಬೆಕ್ಕು ಇಷ್ಟ ಟೀಚರ್!
**ಮೇಷ್ಟ್ರು:** ಯಾಕೋ?
**ಕಿಟ್ಟಿ:** ಅದು ಅಡ್ಡ ಬಂದರೆ ನಮ್ಮ ಅಜ್ಜಿ ಶಾಲೆಗೆ ಹೋಗಬೇಡ ಅಂತಾರೆ ಅದಕ್ಕೆ.

**ಮಗ:** ಅಮ್ಮಾ, ಸ್ಕೂಲ್‌ನಲ್ಲಿ ಮಿಸ್ ತುಂಬಾ ಹೊಡಿತಾರಮ್ಮ.
**ಅಮ್ಮಾ:** ತುಂಬಾ ಗಲಾಟೆ ಮಾಡ್ತೀಯೇನೊ...
**ಮಗ:** ಇಲ್ಲಮ್ಮ, ಸುಮ್ನೆ ಮಲಗಿದ್ರೂ ಎಬ್ಬಿಸಿ ಎಬ್ಬಿಸಿ ಹೊಡಿತಾರೆ.

ಸಂಗ್ರಹ: ವೀಣಾ ಶಂಕರ್, ಬೆಂಗಳೂರು